ದಿನಾಂಕಃ 03.02.2026

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಫಿರ್ಯಾದುದಾರರ ಪರ ಶ್ರೀ ಎಸ್ ಆರ್ ಬಿ ವಕೀಲರಿಂದಃ**

ಸಾಕ್ಷಿ ತನ್ನ ಮುಖ್ಯ ವಿಚಾರಣೆಯ ಪರವಾಗಿ ತನ್ನ ಪ್ರತಿಜ್ಞಾ ಪತ್ರವನ್ನು ಹಾಜರುಪಡಿಸಿದ್ದು, ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ ಎಂದು ತಿಳಿಸಿರುತ್ತಾರೆ.

ಈ ಕೇಸಿನಲ್ಲಿ ಈಗಾಗಲೇ ಸಾಕ್ಷಿಯ ಪ್ರಮಾಣೀಕೃತ ಹೇಳಿಕೆಯಲ್ಲಿ ನಿಪಿ – 1 ರಿಂದ 5 ರಂತೆ ದಾಖಲೆಗಳನ್ನು ಗುರುತಿಸಲಾಗಿದ್ದು, ಅವುಗಳನ್ನು ಸಾಕ್ಷಿ ತನ್ನ ವಿಚಾರಣೆಯಲ್ಲಿ ಅಳವಡಿಸಿಕೊಂಡಿರುತ್ತಾರೆ.

ಸಾಕ್ಷಿ ನಿಪಿ – 1 ರಲ್ಲಿರುವ ಆರೋಪಿಯ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ – 1(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿ ದಿಃ 10.10.2018 ರ ಸಾಲದ ಒಪ್ಪಿಗೆ ಪತ್ರ ಹಾಜರುಪಡಿಸಿದ್ದು, ಅದನ್ನು ನಿಪಿ – 6 ಎಂದು ಗುರುತಿಸಲಾಯಿತು.

(ಆದ್ದರಿಂದ ದೂರಿನಲ್ಲಿ ಕೇಳಿದ ಪರಿಹಾರ ನೀಡಬೇಕಾಗಿ ಪ್ರಾರ್ಥನೆ.)

**(ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಲ್ಲಿ ಗಣಕೀಕೃತ ಮಾಡಲಾಗಿದೆ.**

**ಓ ಹೇ ಕೇ ಸ ಇದೆ.**

**ಹಿರಿಯ ವ್ಯವಹಾರ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಶಿಕಾರಿಪುರ.**